
ಪದಬಂಧ



ಎಡದಿಂದ ಬಲಕ್ಕೆ:

1. ಅಭ್ಯಾಗತರಾಗಿ ಬಂದರೆಂದು ವಿರೋಧ ಏಕೆ? (4)
3. ಬಿರುಸಾದ ಗಾಳಿಯ ಜೊತೆಗೇ ಇದೆಂಥ ಸುಗಂಧ! (3)
4. ಖಚಿತ ಜಾಗ ತೋರಿಸಲು ಜನ್ಮ ಕುಂಡಲಿ ಬೇಕೇ? (3)
6. ಹಳಬನಾದೊಡನೆ ಶಕ್ತಿ ರಹಿತನಾದ (4)
7. ಕೌಶಲ್ಯವಂತರು ಬಿಡಿ ಜನಕರಾಜನ ಮೊಮ್ಮಕ್ಕಳು (4)
9. ಹೆಸರು ಸಹಸ್ರಾರು ಸರಿ. ಆದರೆ ಹೀಗೆಂದರೆ ಭೂಮಿ (4)
12. ಅವನ ರಾಗಾಲಾಪನೆ ಕೇಳಿ ಹುಟ್ಟಿದ ಪ್ರೀತಿ (4)
14. ಹೀಗೆ ಮಾರಿದ್ದರಲ್ಲಿ ಆದರ್ಶವೇ ಹಿಂದು ಮುಂದು (3)
15. ಮಳೆ ನಕ್ಷತ್ರದಂತೆಯೇ ಸುಂದರ ಡಬ್ಬಿ (3)
16. ಮಾಣಿಕ್ಯದಾರತಿ ಮಾಡಿದರೆ ಬಂದೀತೇ ಸಾಲದಿಂದ ಸ್ವಾತಂತ್ರ್ಯ? (4)

ಮೇಲಿಂದ ಕೆಳಕ್ಕೆ:

1. ಅಭಿಮನ್ಯು ಎಂದರೇ ಎಲ್ಲರಿಗೂ ಪ್ರೀತಿ (4)
2. ರಾಜ್ಯಕ್ಕೆಲ್ಲ ಒಮ್ಮೆ 'ಬಿಡುವಿನ ಸಮಯ' ಬಂದೀತೇ? (4)
3. ಈ ಬಾರಿಯ ಫಸಲು 'ಒಳ್ಳೇ ಬೆಳೆ' (3)
5. ಕೇಳಲಿಕ್ಕೂ ಮೊದಲೇ ಕರಡು, ಬರೆಸು (3)
6. ಬೇಡುವವರ ಮುಂದೆ ಏನೀ ಜಂಬದ ಮಾತು? (4)
8. ವೇಷಧಾರಿಯಾದಾಗ ಓಡಿದ್ದು ಬಾಣದಷ್ಟು ಬೇಗ (4)
10. ಸವಾರಿ ಮಾಡುತ್ತಲೇ ಹಾಡಿದ್ದು ಎಂಥ ಅದ್ಭುತ ರಾಗ! (3)
11. ಹೊಟ್ಟು ಮಾರುವ ಕೆಲಸವಾದರೂ ಹಿಡಿದ ಪಟ್ಟು ಬಿಡದಾಕೆ (4)
12. ಅತಿಶಯೋಕ್ತಿಗೆ ಕಾರಣ ವಿಪರೀತದ ಪೂಜ್ಯ ಭಾವ (4)
13. ಈ ಗಿರಣಿಯ ಒಡತಿಗೆ ಸೂಕ್ತ ಹೆಸರೇನು?(3)

## 13-11-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭಿಪ್ರಾಯ; 3. ದಶಮಿ; 4. ಕ್ಷಿತಿಜ; 6. ತಡಗುಣಿ; 7. ಹಾವುಗೆ; 9. ಕಾನಕ; 11. ಕೆಲವು; 13. ಜಿಪುಣ; 15. ವಾಚಸ್ಪತಿ; 17 ಸುತಲ; 18. ಮಿನುಗು; 19. ಗದಾಧರ.

ಮೇಲಿಂದ ಕೆಳಕ್ಕೆ:

1. ಅಮಿತ; 2. ಯಕ್ಷಿಣಿ; 3. ದಣಿವು; 5. ಜತನ; 7. ಹಾರೈಕೆ; 8. ಗೆಲುವು; 9. ಕಾರಂಜಿ; 10. ಕರಣ; 12. ಲಕ್ಷಿಸು; 14. ಪುನುಗು; 15. ವಾಲಗ; 16. ತಿಮಿರ.

## ಪ್ರಶ್ನಾಂಕಣ

# ಡಿಯಾನ್ ಫಾಸ್ಸಿ ಯಾರು?

ಡಿಯಾನ್ ಫಾಸ್ಸಿ– ಆಕೆ ವಿಶ್ವಖ್ಯಾತಿ ಗಳಿಸಿರುವ ಒಬ್ಬ ಸಂಶೋಧಕಿ. ವಿಖ್ಯಾತ ನಿಸರ್ಗ ಸಂಶೋಧಕರ ಪಟ್ಟಿಯಲ್ಲಿ ಆಕೆಯದು ಒಂದು ಅಗ್ರಮಾನ್ಯ ಹೆಸರು. ಚಿಂಪಾಂಜಿಗಳ ಅಧ್ಯಯನಕ್ಕೆ 'ಜೇನ್ ಗುಡ್ಡಾಲ್', ಒರಾಂಗ್ ಉಟಾನ್‌ಗಳ ಅಧ್ಯಯನಕ್ಕೆ 'ಗಾಲ್ಡಿಕಾಸ್'ರಂತೆಯೇ ಗೊರಿಲ್ಲಗಳ ಅಧ್ಯಯನದಲ್ಲಿ 'ಡಿಯಾನ್ ಫಾಸ್ಸಿ'ಯದು (ಚಿತ್ರ–1) ಅದ್ವಿತೀಯ ವಿಶ್ವ ಪ್ರಸಿದ್ಧಿ.

ವಾನರರ ನಾಲ್ಕು ವಿಧಗಳಲ್ಲಿ ಅತ್ಯಂತ ದೈತ್ಯ ಗಾತ್ರದ್ದಾದ ಗೊರಿಲ್ಲಗಳಲ್ಲಿ ಎರಡು ಪ್ರಮುಖ ಉಪ ಪ್ರಭೇದಗಳಿವೆ: 'ಮೌಂಟೇನ್ ಗೊರಿಲ್ಲ ಮತ್ತು ಲೋ–ಲ್ಯಾಂಡ್ ಗೊರಿಲ್ಲ.' ಮೌಂಟೇನ್ ಗೊರಿಲ್ಲಗಳು ಆಫ್ರಿಕ ಖಂಡದ ಜಾಯಿರ್ ಕಾಂಗೋ ರುವಾಂಡಾ ಮತ್ತು ಉಗಾಂಡಾದ ಮೃತ ಅಗ್ನಿ ಪರ್ವತಗಳ ಇಳಿಜಾರುಗಳನ್ನು ಆವರಿಸಿರುವ ನಿಬಿಡ ವೃಷ್ಟಿ ವನಗಳಿಗಷ್ಟೇ ಸೀಮಿತವಾಗಿ ನೆಲಸಿವೆ. ಪ್ರಥಮವಾಗಿ 1861ರಲ್ಲಿ ಎಂದರೆ ಸುಮಾರು 150 ವರ್ಷಗಳ ಹಿಂದಷ್ಟೇ ಮನುಷ್ಯರಿಗೆ ಗೋಚರಿಸಿದ ಈ ವಾನರರು (ಚಿತ್ರ–2) ಆಗ ಲಕ್ಷಾಂತರ ಸಂಖ್ಯೆಯಲ್ಲಿದ್ದು ಮಾನವರ ನಾನಾ ವಿಧ ಹಾವಳಿಗಳಿಂದ ನಿರಂತರ ಕ್ಷೀಣಿಸುತ್ತ ಪ್ರಸ್ತುತ ಒಂದು ಸಾವಿರಕ್ಕಿಂತ ಕಡಿಮೆ ಸಂಖ್ಯೆಯಲ್ಲಿವೆ; ಅಳಿವ ಹಾದಿಯಲ್ಲಿವೆ. ಈ ವಾನರರ ಸ್ವಭಾವದ, ಜೀವನ ಕ್ರಮದ, ಸ್ಥಿತಿ–ಗತಿಗಳ ಪ್ರತ್ಯಕ್ಷ ಅಧ್ಯಯನವನ್ನು ಕೈಗೊಂಡು ಜಗತ್ತಿಗೆ ಪರಿಚಯಿಸಿದ ಧೀಮಂತ ಧೈರ್ಯವಂತ ವಿಜ್ಞಾನಿ ಡಿಯಾನ್ ಫಾಸ್ಸಿ.

ಕ್ಯಾಲಿಫೋರ್ನಿಯಾದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿದ್ದ ಡಿಯಾನ್ ಫಾಸ್ಸಿ




ಗೊರಿಲ್ಲಗಳ ನೇರ ಅಧ್ಯಯನಕ್ಕೆಂದು ಆಫ್ರಿಕದ ಕಾಂಗೋ ದೇಶದ ಅಡವಿ ಪ್ರದೇಶಕ್ಕೆ ಇಸವಿ 1967 ರಲ್ಲಿ ಬಂದಿಳಿದು ಅಡವಿ ನಡುವಿನ ಗುಡಿಸಿಲೊಂದರಲ್ಲಿ ನೆಲಸಿ ಗೊರಿಲ್ಲಗಳೊಡನೆ ಸಖ್ಯ ಬೆಳೆಸಿದರು. ಕೆಲವೇ ತಿಂಗಳ ನಂತರ ನೂರಾರು ಗೊರಿಲ್ಲಗಳು ವಾಸಿಸುತ್ತಿದ್ದ 'ರುವಾಂಡಾ'ದ ವೃಷ್ಟಿವನಕ್ಕೆ ವಾಸ್ತವ್ಯ ಬದಲಿಸಿ ಅಲ್ಲಿನ ಗೊರಿಲ್ಲ ಕುಟುಂಬಗಳ ಸಂಪೂರ್ಣ ವಿಶ್ವಾಸ ಗಳಿಸಿ ಅವುಗಳ ಜೊತೆ ಜೊತೆಗೇ ಇದ್ದು ಅವುಗಳ ಬದುಕಿನ ರೀತಿ ನೀತಿಗಳ ಸಂಪೂರ್ಣ ಪರಿಚಯ ಪಡೆದರು. ಸುಪ್ರಸಿದ್ಧ 'ನ್ಯಾಶನಲ್ ಜಿಯೋಗ್ರಾಫಿಕ್ ಸಂಸ್ಥೆ'ಯ ಧನ ಸಹಾಯ ಪಡೆದು ನಿರಂತರ ಹದಿನೆಂಟು ವರ್ಷ ಕಾಲ ಈ ವಿಜ್ಞಾನಿ ಕೈಗೊಂಡ ಅಧ್ಯಯನವೇ ಈಗಲೂ ಮೌಂಟೇನ್ ಗೊರಿಲ್ಲಗಳ ಬಗೆಗಿನ ಅತ್ಯಂತ ಪ್ರಧಾನ ಮಾಹಿತಿ ಆಕರ.

ತನ್ನ 34ರ ಹರಯದಲ್ಲಿ ಗೊರಿಲ್ಲಗಳ ನೇರ ಅಧ್ಯಯನ ಆರಂಭಿಸಿದ ಈ ಸಂಶೋಧಕಿ ಜೊತೆ ಜೊತೆಗೇ ಈ ವಾನರರ ಅವನತಿಗೆ ಕಾರಣವಾದ ಕಳ್ಳ ಬೇಟೆ, ಆವಾಸ ನಾಶ ಇತ್ಯಾದಿ ಮಾನವ ಅಕೃತ್ಯಗಳನ್ನೂ ಜಗತ್ತಿಗೆ ತೆರೆದಿಟ್ಟರು. ಹಾಗಾಗಿ ಅಲ್ಲಿನ ಕಳ್ಳಬೇಟೆಗಾರರ, ನೀಚ ರಾಜಕಾರಣಿಗಳ ದ್ವೇಷಕ್ಕೆ ಗುರಿಯಾದರು. ತತ್ಫಲವಾಗಿ ಅಂಥ ಕೆಲ ದುಷ್ಟಜನ ಇಸವಿ 1995 ರಲ್ಲಿ ಆಕೆಯನ್ನು ದಾರುಣವಾಗಿ ಹತ್ಯೆ ಮಾಡಿದರು. ಅದೊಂದು ಮಹಾದುರಂತ.

■ ಎನ್. ವಾಸುದೇವ್